




## ಹಳ್ಳಿಗಳಿಂದ ರೆಸಾರ್ಟ್‌ಗೆ ಎತ್ತಿನ ಬಂಡಿ!

ಈಚೆಗೆ ಮಂಡ್ಯದ 'ಸ್ಪೋರ್ಟ್ಸ್ ಕ್ಲಬ್' ವತಿಯಿಂದ ಕನಕಪುರ ಸಮೀಪದಲ್ಲಿ ಇರುವ ರೆಸಾರ್ಟ್‌ಗೆ ಮಿತ್ರರ ಜೊತೆ ಹೋಗಿದ್ದೆ. ಅಲ್ಲಿ ಗ್ರಾಹಕರ ಆಕರ್ಷಣೆಗೆಂದು ಹಲವು ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಅವುಗಳಲ್ಲಿ ಗಮನ ಸೆಳೆದಿದ್ದು ರೈತರು ಬಳಸುತ್ತಿದ್ದ ಮರದ ಗಾಡಿ ಅಥವಾ ಎತ್ತಿನ ಬಂಡಿ.

ಸಂಚಾರ, ಸಾಗಾಣಿಕೆ ಹಾಗೂ ಹಳ್ಳಿಗರ ಬದುಕಿನ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳ ಜೀವನಾಡಿಯಂತಿದ್ದ ಮರದ ಗಾಡಿಯು ಇಂದು ರೆಸಾರ್ಟ್‌ನಂತಹ ಪ್ರದೇಶಗಳಲ್ಲಿ ಅಲಂಕಾರದ ವಸ್ತುವಾಗಿ ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೃಷಿ ಚಟುವಟಿಕೆ ಹಾಗೂ ಸಂಚಾರಕ್ಕಾಗಿ ಬಳಸಲಾಗುತ್ತಿದ್ದ ಎತ್ತಿನ ಬಂಡಿಯ ಇಂದು ಮೂಲೆಗುಂಪಾಗಿದೆ. ಮರದ ಗಾಡಿಗೆ ಹಿಂದೆ ಮರದ ಚಕ್ರವೇ ಆಸರೆಯಾಗಿತ್ತು. ಕ್ರಮೇಣ ಆ ಜಾಗಕ್ಕೆ ಟೈರ್ ಬಂತು. ಹಾಗೇ ಕೃಷಿ ಚಟುವಟಿಕೆಯಲ್ಲಿನ ಎತ್ತಿನ ಬಂಡಿಯ ಜಾಗಕ್ಕೆ ಪವರ್ ಟಿಲ್ಲರ್, ಟ್ರಾಕ್ಟರ್, ಮಿನಿ ಟ್ರಾಕ್ಟರ್‌ನಂತಹ ಯಂತ್ರೋಪಕರಣಗಳು ಬಂದ ಮೇಲಂತೂ ಎತ್ತಿನ ಬಂಡಿಗಳನ್ನು ಕೇಳುವವರೇ ಇಲ್ಲವಾಯಿತು. ಅದರ ಪರಿಣಾಮವೇ ಬಹುತೇಕ ಹಳ್ಳಿಗಳಲ್ಲಿ ಇಂದು ಎತ್ತಿನ ಬಂಡಿಗಳು ಕಣ್ಮರೆಯಾಗಿವೆ. ಅದರ ಬದಲಿಗೆ ರೆಸಾರ್ಟ್‌ನಂತಹ ಜಾಗಗಳಲ್ಲಿ ನೆನಪಿಗಷ್ಟೇ ಇವುಗಳನ್ನು ಕಾಣಬಹುದು.

–ಸಿ.ಸಿದ್ದರಾಜು ಆಲಕೆರೆ, ಮಂಡ್ಯ

## ದೈತ್ಯ ಕಾಡು ಚೇಳು!

ಮೊನ್ನೆ ಕಲ್ಲಿನ ಮೇಲೆ ಅಡ್ಡಾಡುತ್ತಿದ್ದ ಈ ಚೇಳು ಅರಣ್ಯದಲ್ಲಿ ಆಕಾಶ ಕ್ಯಾಮರಾಕ್ಕೆ ಗೋಚರಿಸಿದ್ದು. ಸಂಧಿಪದಿ ವಂಶದ ಸ್ಕಾರ್ಪಿನಿಡೇ ಕುಟುಂಬಕ್ಕೆ ಸೇರಿದ ಇದರ ಜಾತಿಯ ಹೆಸರು ಹಿಟಿರೋಮೆಟ್ರಸ್. ಇವಕ್ಕೆ ದೈತ್ಯ ಕಾಡು ಚೇಳು (ಜೈಂಟ್ ಫಾರೆಸ್ಟ್ ಸ್ಕಾರ್ಪಿನ್) ಎನ್ನುವರು. ಇದು ಜೀವಂತ ಚೇಳುಗಳಲ್ಲಿ ದೈತ್ಯವಾದುದು. ಇವು ನೂರರಿಂದ ಎರಡು ನೂರು ಮಿ.ಮೀ. ಉದ್ದವಿರುತ್ತವೆ. ಹೆಚ್ಚಾಗಿ ಕಪ್ಪಾಗಿರುತ್ತವೆ, ಕೆಲವೊಮ್ಮೆ ಕಂದು ಬಣ್ಣವಿರುತ್ತದೆ. ಸಂಯುಕ್ತಾಕ್ಷಿಗಳುಂಟು. ರಾತ್ರಿ ಆಹಾರಕ್ಕಾಗಿ ಸಂಚರಿಸುತ್ತವೆ.

ಇದನ್ನು ಭಾರತವನ್ನೊಳಗೊಂಡು ಶ್ರೀಲಂಕ, ಥೈಲಂಡ್, ಚೀನ, ಬಾಂಗ್ಲಾ ದೇಶದಲ್ಲಿ ನೋಡಬಹುದು. ಎಲೆಗಳಡಿಯಲ್ಲಿ, ಡೊಗರುಗಳಲ್ಲಿ ವಾಸಿಸುತ್ತವೆ. ಈ ಚೇಳಿನ ಕಡಿತದಿಂದ ಸಾವು ಸಂಭವಿಸುವುದಿಲ್ಲ. ಆದರೆ ಚರ್ಮ ಕೆಂಪಾಗುವುದು, ಬಾವು, ನೋವು ಕಂಡುಬರಬಹುದು.

–ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು



## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly